ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 06/08/2020

# ಅಮೆರಿಕದಲ್ಲಿ ಶ್ರೀರಾಮಮಂದಿರ ಸ್ತಬ್ಧಚಿತ್ರ

## ನ್ಯೂಯಾರ್ಕ್‌ನ ಟೈಮ್ಸ್‌ಸ್ಕ್ವೇರ್‌ನಲ್ಲಿ ಬೃಹತ್ ಪರದೆಯಲ್ಲಿ ಮಂದಿರ ಪ್ರದರ್ಶನ

**ವಾಷಿಂಗ್ಟನ್:** ರಘುರಾಮನ ಮಂದಿರ ನಿರ್ಮಾಣಕ್ಕೆ ಅಡಿಗಲ್ಲು ಹಾಕುವ ಗಳಿಗೆಯನ್ನು ಬರೀ ಭಾರತದಲ್ಲಿ ಮಾತ್ರವಲ್ಲ, ವಿಶ್ವದ ಮೂಲೆಮೂಲೆಯಲ್ಲಿ ಸಂಭ್ರಮಿಸಲಾಗಿದೆ. ಅಮೆರಿಕದಲ್ಲಂತೂ ಈ ಸಂಭ್ರಮ ಸ್ವಲ್ಪ ಜಾಸ್ತಿಯೇ ಇತ್ತು. ಕೊರೊನಾ ಇರುವ ಕಾರಣ ಸಾರ್ವಜನಿಕ ಸಭೆಗಳು ನಡೆಯಲಿಲ್ಲ, ಬಹುತೇಕರು ತಮ್ಮತಮ್ಮ ಮನೆಗಳಲ್ಲಿ ದೀಪ ಹಚ್ಚಿ ರಾಮಪೂಜೆ ಮಾಡಿದರು. ವಿಶೇಷವೆನಿಸಿದ್ದು ನ್ಯೂಯಾರ್ಕ್‌ನ ಟೈಮ್ಸ್‌ಸ್ಕ್ವೇರ್‌ನಲ್ಲಿ ಹಾಕಲಾಗಿದ್ದ ಬೃಹತ್ ಪರದೆ. ಅದರಲ್ಲಿ ರಾಮನ ಚಿತ್ರಗಳು, ಅಯೋಧ್ಯೆ ರಾಮಮಂದಿರದ ಚಿತ್ರಗಳು ಮೂಡಿ ಬರುತ್ತಿದ್ದವು. ಸಂಭ್ರಮಾಚರಣೆಯಲ್ಲಿ ವಿಶ್ವ ಹಿಂದೂ ಪರಿಷತ್‌ನ ಅಮೆರಿಕ ಶಾಖೆ ಮುಖ್ಯಪಾತ್ರ ವಹಿಸಿತ್ತು. ವಾಷಿಂಗ್ಟನ್‌ನಲ್ಲಿ ವಿಹಿಂಪ ಸದಸ್ಯರು ಟ್ರಕ್ಕನ್ನೇ ಸ್ತಬ್ಧಚಿತ್ರದಂತೆ ಬದಲಿಸಿದ್ದರು. ಇಡೀ ವಾಷಿಂಗ್ಟನ್ ನಗರಪೂರ್ತಿ ಅದು ಸಂಚರಿಸಿತು. ಆ ಟ್ರಕ್‌ನ ಡಿಜಿಟಲ್ ಪರದೆಯಲ್ಲಿ ಶ್ರೀರಾಮ ಮಂದಿರದ ಚಿತ್ರಗಳು ಪ್ರದರ್ಶನಗೊಳ್ಳುತ್ತಿದ್ದವು. ಇನ್ನು ಜೈಶ್ರೀರಾಮ್ ಎನ್ನುವ ಕೂಗಂತೂ ಮೇರೆ ಮೀರಿತ್ತು.



ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್‌ನಲ್ಲಿ ಪ್ರದರ್ಶನಗೊಂಡ ರಾಮಮಂದಿರ.

**ಅಂತರ್ಜಾಲ ಸಭೆ:** ಕೊರೊನಾ ಕಾರಣಕ್ಕೆ ನೇರವಾಗಿ ಸಭೆ ಸೇರಲು ಸಾಧ್ಯವಿಲ್ಲದ್ದರಿಂದ, ಇಡೀ ಅಮೆರಿಕದಾದ್ಯಂತ ಹಲವಾರು ಹಿಂದೂ ಸಮೂಹಗಳು, ಅಂತರ್ಜಾಲದ ಮೂಲಕ ಛಾಯಾಸಭೆ ನಡೆಸಿದವು. ಅಲ್ಲೆಲ್ಲ ಶ್ರೀರಾಮ ಮಂದಿರ ನಿರ್ಮಾಣದ ಮಹತ್ವವನ್ನು ಹೇಳಲಾಯಿತು.



ಅಯೋಧ್ಯೆಯಲ್ಲಿ ರಾಮಮಂದಿರಕ್ಕೆ ಶಿಲಾನ್ಯಾಸ ನಡೆದಿರುವಂತೆಯೇ ದೇಶಾದ್ಯಂತ ಹಬ್ಬದ ವಾತಾವರಣ ಮೂಡಿದೆ. ಜಬಲ್‌ಪುರದಲ್ಲಿ ಬುಧವಾರ ರಾತ್ರಿ ದೀಪಾವಳಿ ಸದೃಶ ಚಿತ್ರಣ.

## ಕಂಚಿ ಕಾಮಕೋಟಿ ಪೀಠದಿಂದ ಅಯೋಧ್ಯೆಗೆ ಚಿನ್ನದ ನಾಣ್ಯ

**ಕಂಚಿ (ತಮಿಳುನಾಡು):** ಪ್ರಸಿದ್ಧ ಕಂಚಿ ಕಾಮಕೋಟಿ ಪೀಠದಿಂದಲೂ ಅಯೋಧ್ಯೆಗೆ ಚಿನ್ನ, ಬೆಳ್ಳಿ ನಾಣ್ಯಗಳು ಹಾಗೂ ವಾಸ್ತು ಸಾಮಗ್ರಿಗಳನ್ನು ಕಳುಹಿಸಿಕೊಡಲಾಗಿದೆ. ಅಲ್ಲದೇ ಏಕಾಂಬರೇಶ್ವರ, ಕಾಮಾಕ್ಷಿ ಹಾಗೂ ಇತರ ವಿಷ್ಣು ದೇವಸ್ಥಾನಗಳಿಂದ ಸಂಗ್ರಹಿಸಿದ ಪವಿತ್ರ ಮಣ್ಣನ್ನು ವಿಮಾನದ ಮೂಲಕ ಕಳುಹಿಸಿಕೊಡಲಾಗಿದೆ ಎಂದು ಶ್ರೀಮಠದ 70ನೇ ಪೀಠಾಧಿಪತಿ ವಿಜಯೇಂದ್ರ ಸರಸ್ವತಿ ತಿಳಿಸಿದ್ದಾರೆ.

# ಸಾಯುವ ಮುನ್ನ ಅಯೋಧ್ಯೆಗೆ ತೆರಳುವೆ

## ವಿವಾದಿತ ಕಟ್ಟಡ ಧ್ವಂಸ ವೇಳೆ ಕರಸೇವಕರಾಗಿದ್ದ ಸುಭಾಷ್ ಬಯಕೆ

**ಪಣಜಿ:** ನಾನು ಸಾಯುವ ಮುನ್ನ ಅಯೋಧ್ಯೆ ರಾಮ ಜನ್ಮಸ್ಥಳಕ್ಕೆ ಭೇಟಿ ನೀಡುವ ಬಯಕೆ ಹೊಂದಿದ್ದೇನೆ ಎಂದು ಬಿಜೆಪಿ ನಾಯಕ, ನಿವೃತ್ತ ಶಿಕ್ಷಕ ಸುಭಾಷ್ ಸಲ್ಕಾರ್ ತಿಳಿಸಿದ್ದಾರೆ. 1992ರ ಡಿಸೆಂಬರ್ 6ರಂದು ವಿವಾದಿತ ಕಟ್ಟಡ ಧ್ವಂಸ ವೇಳೆ 750 ಕರಸೇವಕರ ಗುಂಪಿನಲ್ಲಿ ಸುಭಾಷ್ ಸಲ್ಕಾರ್ (71) ಕೂಡ ಇದ್ದರು. ಬುಧವಾರ ರಾಮ ಮಂದಿರ ನಿರ್ಮಾಣ ಭೂಮಿ ಪೂಜೆ ಕಾರ್ಯಕ್ರಮವನ್ನು ಟೀವಿ ಮೂಲಕ ವೀಕ್ಷಿಸಿದ ಬಳಿಕ ಪ್ರತಿಕ್ರಿಯಿಸಿರುವ ಸಲ್ಕಾರ್, ಅಂದು ನಮ್ಮ ಜೊತೆ ಕೇಂದ್ರ ಆಯುಷ್ ಸಚಿವ ಶ್ರೀಪಾದ್ ನಾಯಕ್ ಹಾಗೂ ಮಾಜಿ ಮುಖ್ಯಮಂತ್ರಿ ದಿ.ಮನೋಹರ್ ಪರ್ರಿಕರ್ ಕೂಡ ಇದ್ದರು. ಏಳು ದಿನಗಳ ಕಾಲ ಅಲ್ಲೇ ಉಳಿದುಕೊಂಡಿದ್ದವು. ಬಿಜೆಪಿ ಹಿರಿಯ ನಾಯಕ ಎಲ್.ಕೆ. ಅಡ್ವಾಣಿ ಮತ್ತಿತರ ಭಾಷಣ ಕೇಳಿದ ಬಳಿಕ ಪರ್ರಿಕರ್



ಸೇರಿದಂತೆ ನಾವೆಲ್ಲರೂ ಪೆಂಡಾಲ್‌ನಲ್ಲೇ ಮಲಗುತ್ತಿದ್ದೆವು ಎಂದು ಸ್ಮರಿಸಿದರು.

ಕೊರೊನಾ ಬಿಕ್ಕಟ್ಟು ಇಲ್ಲದಿದ್ದರೆ ನಾನು ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿದ್ದೆ. ಸಾಯುವ ಮುನ್ನ ಒಮ್ಮೆ ಅಯೋಧ್ಯೆಗೆ ತೆರಳುವ ಇಚ್ಛೆ ಹೊಂದಿದ್ದೇನೆ ಎಂದು ತಿಳಿಸಿದ್ದಾರೆ. ಸಲ್ಕಾರ್ ಗೋವಾ ಬಿಜೆಪಿ ಕಾರ್ಯಕಾರಿ ಸಮಿತಿ ಸದಸ್ಯರು ಕೂಡ ಆಗಿದ್ದಾರೆ.

# ವಿವಾದಿತ ಹೇಳಿಕೆ: ಒವೈಸಿ ವಿರುದ್ಧ ಹಿಂದೂ ಮಹಾಸಭಾ ದೂರು

**ನವದೆಹಲಿ:** ಭೂಮಿಪೂಜೆಯ ದಿನದಂದೇ ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್



ಒವೈಸಿ ಹಾಗೂ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ವಿರುದ್ಧ ಬುಧವಾರ ಹಿಂದೂ ಮಹಾಸಭಾ ದೆಹಲಿ ಪೊಲೀಸರಿಗೆ ದೂರು ನೀಡಿದೆ. ರಾಮ್‌ಲಲ್ಲಾ ವಿರುದ್ಧ ದ್ವೇಷ ಸಾಧಿಸುವಂತಹ, ರಾಮನ ಆಸ್ತಿ, ಹಿಂದೂ ಸಮುದಾಯದ ವಿರುದ್ಧ ಹಿಂಸೆಗೆ ಪ್ರಚೋದನೆ ನೀಡುವಂತಹ ಹೇಳಿಕೆಯನ್ನು ಒವೈಸಿ ಹಾಗೂ ಮುಸ್ಲಿಂ ಕಾನೂನು ಮಂಡಳಿ ನೀಡಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. 'ವಿವಾದಿತ ಜಾಗದಲ್ಲಿ ಬಾಬರಿ ಮಸೀದಿ ಇತ್ತು, ಈಗಲೂ ಇದೆ, ಮುಂದೆಯೂ ಇರುತ್ತದೆ. ಸರ್ಕಾರಕ್ಕೆ ಯಾವುದೇ ಧರ್ಮ ಇರಬಾರದು. ಹಾಗಾಗಿ ಪ್ರಧಾನಿ ಮೋದಿ ಭೂಮಿಪೂಜೆಯಲ್ಲಿ ಪಾಲ್ಗೊಳ್ಳಬಾರದು ಎಂದು ಹೇಳಿದ್ದೆ, ಆದರೂ ಅವರು ಪಾಲ್ಗೊಂಡಿದ್ದಾರೆ. ಇದು ಪ್ರಜಾಸತ್ತೆ ಮತ್ತು ಜಾತ್ಯತೀತತೆಯ ಸೋಲು ಹಾಗೂ ಹಿಂದುತ್ವದ ಗೆಲುವು' ಎಂಬ ಹೇಳಿಕೆಯನ್ನು ಒವೈಸಿ ನೀಡಿದ್ದರು.

# ಶಾಶ್ವತ ಮಾನವೀಯ ಮೌಲ್ಯಗಳ ಪ್ರತೀಕ

**ನವದೆಹಲಿ:** ಶಾಶ್ವತ ಮಾನವೀಯ ಮೌಲ್ಯಗಳ ಉತ್ಕೃಷ್ಟ ಪ್ರತೀಕವಾಗಿ ಅಯೋಧ್ಯೆಯಲ್ಲಿ ರಾಮ ಮಂದಿರ ನಿಲ್ಲಲಿದೆ. ಅಲ್ಲದೇ ಇದು ಧಾರ್ಮಿಕ ವಿಷಯಕ್ಕಿಂತ ಮೀರಿದ್ದಾಗಿದೆ ಎಂದು ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ತಿಳಿಸಿದ್ದಾರೆ. ರಾಮಮಂದಿರ ನಿರ್ಮಾಣ ಭೂಮಿಪೂಜೆ ಸಮಾರಂಭದ ಬೆನ್ನಲ್ಲೇ ಫೇಸ್‌ಬುಕ್‌ನಲ್ಲಿ ಬುಧವಾರ ಪ್ರತಿಕ್ರಿಯಿಸಿರುವ ಅವರು, ಎಲ್ಲ ರೀತಿಯ ವಿಭಜನೆಗಳು, ಅಡ್ಡಿಗಳು ಹೊರತಾಗಿಯೂ ಶ್ರೀರಾಮನ ನಡವಳಿಕೆ ಹಾಗೂ ಮೌಲ್ಯಗಳು ಇಡೀ ಭಾರತದ ಪ್ರಜ್ಞೆಯ ಮೂಲವಾಗಿದೆ. ಅಲ್ಲದೇ, ಅವು ಇಂದಿಗೂ ಪ್ರಸ್ತುತವಾಗಿದೆ ಎಂದು ಹೇಳಿದ್ದಾರೆ. ವೆಂಕಯ್ಯ ನಾಯ್ಡು ಕುಟುಂಬವು ಕೊರೊನಾ ಸಂಕಷ್ಟಕ್ಕೆ ಹಾಗೂ ರಾಮ ಮಂದಿರ ನಿರ್ಮಾಣಕ್ಕೆ ತಲಾ 5 ಲಕ್ಷ ರೂ. ದೇಣಿಗೆ ನೀಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.